ಕರ್ನಾಟಕ ಸರ್ಕಾರ

ಸಂಖ್ಯೆ : ಗ್ರಾಅಪ/38/ಜೈಅಯೋ/2015

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ 04.05.2015

ಇಂದ,

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ,

ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.

ಮಾನ್ಯರೇ,

ವಿಷಯ : 2015–16ನೇ ಸಾಲಿಗೆ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವ ಕುರಿತು

ಉಲ್ಲೇಖ : 1) 2014–15ನೇ ಸಾಲಿನ ಆಡಳಿತಾತ್ಮಕ ಮಂಜೂರಾತಿ ಪತ್ರ ಸಂಖ್ಯೆ : ಗ್ರಾಅಪ/19/ಜೈಅಯೋ/2014 ದಿನಾಂಕ 30.07.2014

2) ಕೇಂದ್ರ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯದ ಪತ್ರ ಸಂಖ್ಯೆ : 5–1/2015–BG(NBMMP), ಭಾರತ ಸರ್ಕಾರ, ನವದೆಹಲಿ ದಿನಾಂಕ 01.04.2015.

*****

ಉಲ್ಲೇಖಿತ ಪತ್ರ (1)ರಲ್ಲಿನ 2014–15ನೇ ಸಾಲಿನ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ಸರ್ಕಾರದಿಂದ ನೀಡಲಾಗಿದೆ. ಉಲ್ಲೇಖ (2)ರ ಪತ್ರದ ಮೂಲಕ ಕೇಂದ್ರ ಸರ್ಕಾರವು 2015–16ನೇ ಸಾಲಿಗೆ ಕರ್ನಾಟಕ ರಾಜ್ಯಕ್ಕೆ 16,000 ಭೌತಿಕ ಗುರಿಯನ್ನು ನಿಗದಿಪಡಿಸಲಾಗಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ಉಲ್ಲೇಖ (1)ರಲ್ಲಿ ಸರ್ಕಾರವು ಹೊರಡಿಸಿರುವ ಎಲ್ಲಾ ಮಾರ್ಗಸೂಚಿಯನ್ನು ಮತ್ತು ಈ ಕೆಳಕಂಡ ಅಂಶಗಳನ್ನು ಸಹ ಪಾಲಿಸಿ, 2015–16ನೇ ಸಾಲಿಗೆ ನಿಗದಿಪಡಿಸಿರುವ ಭೌತಿಕ ಗುರಿಯನ್ನು ಸಾಧಿಸಲು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ (ಅನುಬಂಧದಲ್ಲಿ ತಿಳಿಸಿರುವಂತೆ) ಈ ಮೂಲಕ ಆಡಳಿತಾತ್ಮಕ ಮಂಜೂರಾತಿ ನೀಡಿದೆ.

1. ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಡ್ಡಾಯವಾಗಿ 5 ಫಲಾನುಭವಿಗಳನ್ನು ಗ್ರಾಮ ಪಂಚಾಯಿತಿಯು ಆಯ್ಕೆ ಮಾಡತಕ್ಕದ್ದು.

2. ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ ಜೈವಾನಿಲ ಸ್ಥಾವರ ನಿರ್ಮಾಣಕ್ಕೆ ನಿಗದಿಪಡಿಸಿರುವ ಗುರಿಯನ್ನು ಕಡ್ಡಾಯವಾಗಿ ಗ್ರಾಮ ಪಂಚಾಯಿತಿಗಳು ಆಯ್ಕೆ ಮಾಡತಕ್ಕದ್ದು. ಅರ್ಹ ಫಲಾನುಭವಿಗಳಿಗೆ ಶೇ.22.75 ನಿಧಿಯನ್ನು ಭರಿಸಿ, ಗುರಿಯನ್ನು ಸಾಧಿಸತಕ್ಕದ್ದು.

3. ಗ್ರಾಮ ಪಂಚಾಯಿತಿಗಳು ಫಲಾನುಭವಿಗಳ ಪಟ್ಟಿಯನ್ನು ಕ್ಷೀರ ಸಂಗ್ರಹಣಾ ಕೇಂದ್ರಗಳಿಂದ ಪಡೆದು ನೊಂದಾಯಿತ ಟರ್ನ್ ಕೀ ಏಜೆನ್ಸಿಗಳಿಗೆ ಒದಗಿಸತಕ್ಕದ್ದು.

4. ಕೇಂದ್ರ ಸರ್ಕಾರವು ಪ್ರಸ್ತುತ ದೀನಬಂಧು ಮಾದರಿ ಜೊತೆಗೆ HDPE/FRP/RCC Material and based on KVIC design floating type biogas plants of one to six cubic meter capacity are approved under NBMM Programme (ಕೇಂದ್ರ ಸರ್ಕಾರದ ಆದೇಶ ಸಂಖ್ಯೆ : 18/1 2014 ದಿಇ (ಎನ್.ಬಿ.ಎಂ.ಎಂ.ಪಿ.) ದಿನಾಂಕ 26.11.2014) ಮಾದರಿ ಅನಿಲ ಸ್ಥಾವರಗಳನ್ನು ಅನುಮೋದಿಸಿದ್ದು, ಇವುಗಳನ್ನು ಸಹ ಅನುಷ್ಠಾನಗೊಳಿಸಲು ಸರ್ಕಾರವು ತೀರ್ಮಾನಿಸಿದೆ. ಇವುಗಳಿಗೆ ಕೇಂದ್ರ ಮತ್ತು ರಾಜ್ಯದ ಸಹಾಯಧನವನ್ನು ವಿಸ್ತರಿಸಿದೆ.

5. ಟರ್ನ್ ಕೀ ಏಜೆನ್ಸಿಗಳ ಮಾನ್ಯತೆ ಹಾಗೂ ನವೀಕರಣವನ್ನು ಸಂಬಂಧಿಸಿದ ಜಿಲ್ಲಾ ಪಂಚಾಯಿತಿಗಳಿಗೆ ಪ್ರಸಕ್ತ ವರ್ಷದಲ್ಲಿ ನಿರ್ವಹಿಸತಕ್ಕದ್ದು.

6. ಜಿಲ್ಲೆಗೆ ನಿಗದಿಪಡಿಸಿರುವ ವಾರ್ಷಿಕ ಗುರಿಯಲ್ಲಿ ಕನಿಷ್ಠ ಶೇ. 10ರಷ್ಟು ಅನಿಲ ಸ್ಥಾವರಗಳನ್ನು ಮೇಲಿನ ಕ್ರಮ ಸಂಖ್ಯೆ (4) ಮಾದರಿಯನ್ನು ಪ್ರಚುರ ಪಡಿಸತಕ್ಕದ್ದು.

7. ನೊಂದಾಯಿತ ಏಜೆನ್ಸಿಗಳು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಪಕ್ಕದ ಜಿಲ್ಲೆಯಿಂದ ಏಜೆನ್ಸಿಗಳನ್ನು ಪಡೆದು ನಿಗದಿಪಡಿಸಿರುವ ಗುರಿಯನ್ನು ಸಾಧಿಸುವುದು. ಗುರಿಯನ್ನು ಸಾಧಿಸದಿದ್ದಲ್ಲಿ ಸಂಬಂಧಿಸಿದ ಯೋಜನಾ ಅಭಿಯಂತರರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.

8. ಗ್ರಾಮ ಪಂಚಾಯಿತಿಗಳು ನಿಗದಿಪಡಿಸಿದ ಗುರಿಯ ಅನ್ವಯ ಫಲಾನುಭವಿಗಳ ಪಟ್ಟಿಯನ್ನು ಒದಗಿಸದಿದ್ದಲ್ಲಿ, ಸಂಬಂಧಿಸಿದ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸತಕ್ಕದ್ದು.

9. ನಿರ್ಮಾಣಗೊಂಡಿರುವ ಅನಿಲ ಸ್ಥಾವರಗಳ ಸಹಾಯಧನ ಪ್ರಸ್ತಾವನೆ ಹಾಗೂ ಜಿ.ಪಿ.ಎಸ್. ಆಧಾರಿತ ಮೂರು ಹಂತದ ಛಾಯಾ ಚಿತ್ರಗಳನ್ನು ಗಾಂಧಿ ಸಾಕ್ಷಿ ಕಾಯಕದಲ್ಲಿ ಅಳವಡಿಸಿದ ನಂತರವೇ ಸಹಾಯಧನವನ್ನು ಬಿಡುಗಡೆ ಮಾಡತಕ್ಕದ್ದು.

10. ಪ್ರತಿ ತ್ರೈಮಾಸಿಕ ಅವಧಿಗೆ ಒಟ್ಟು ಗುರಿಯಲ್ಲಿ ಕಡ್ಡಾಯವಾಗಿ ಶೇ.25% ರಷ್ಟು ಗುರಿಯನ್ನು (ಅನುಬಂಧದಲ್ಲಿ ತಿಳಿಸಿರುವಂತೆ) ಸಾಧಿಸುವುದು

11. ಈ ಯೋಜನೆಯಡಿ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ: 2810-60-196-6-01 ಯೋಜನೆಯಡಿ ಭರಿಸತಕ್ಕದ್ದು.

12. ಸರ್ಕಾರದಿಂದ ಆಗಿಂದಾಗ್ಗೆ ಹೊರಡಿಸುವ ಆದೇಶ, ಸುತ್ತೋಲೆಗಳನ್ವಯ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವುದು.

ತಮ್ಮ ನಂಬುಗೆಯ,

(ಎನ್. ಕೃಷ್ಣಪ್ಪ)
ನಿರ್ದೇಶಕರು (ಗ್ರಾಮೊಸ್-2) ಮತ್ತು
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಉಪ ಕಾರ್ಯದರ್ಶಿ (ಅಭಿವೃದ್ಧಿ) ಮತ್ತು ಮುಖ್ಯ ಲೆಕ್ಕಾಧಿಕಾರಿಗಳಿಗೆ.
3. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಯೋಜನಾ ಅಭಿಯಂತರರು-ಸ.ಗ್ರಾ.ಇಂ.ಕಾ.
4. ನಿರ್ದೇಶಕರು, ಕೃಷಿ ನಿರ್ದೇಶನಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು.
5. ಉಪ ಜನರಲ್ ಮ್ಯಾನೇಜರ್, ನಬಾರ್ಡ್, ಜೀವನ ಪ್ರಕಾಶ ಅನೆಕ್ಸ್, 113-1, ಜೆ.ಸಿ.ರೋಡ್, ಬೆಂಗಳೂರು.
6. ಸಮನ್ವಯ ಅಧಿಕಾರಿ, ಪ್ರಾದೇಶಿಕ ಜೈವಾನಿಲ ಅಭಿವೃದ್ಧಿ ತರಬೇತಿ ಕೇಂದ್ರ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು-560 024.
7. ವಿಶೇಷಾಧಿಕಾರಿಗಳು (ಜಿಲ್ಲಾ ಪಂಚಾಯತ್) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
8. ನಿರ್ದೇಶಕರು, ಯೋಜನಾ ಉಸ್ತುವಾರಿ ಮತ್ತು ಮಾಹಿತಿ ವಿಭಾಗ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ / ಕಾರ್ಯದರ್ಶಿಗಳ ಇವರ ಆಪ್ತ ಕಾರ್ಯದರ್ಶಿಗಳಿಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
10. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
11. ಹೆಚ್ಚಿನ ಪ್ರತಿಗಳು ಕಡತಕ್ಕೆ

ಅನುಬಂಧ - 1

## 2015-16ನೇ ಸಾಲಿನ ರಾಷ್ಟ್ರೀಯ ಜೈವಾನಿಲ ಮತ್ತು ಗೊಬ್ಬರ ನಿರ್ವಹಣೆ ಕಾರ್ಯಕ್ರಮದಡಿ (NBMMP) ನಿಗದಿಪಡಿಸಲಾದ ವಾರ್ಷಿಕ ಭೌತಿಕ ಗುರಿ

| ಕ್ರ ಸಂ | ಜಿಲ್ಲೆ | 2015-16ನೇ ಸಾಲಿಗೆ ಆಯವ್ಯಯದಲ್ಲಿ ನಿಗದಿಪಡಿಸಿರುವ ಅನುದಾನ | 2015-16ನೇ ಸಾಲಿಗೆ ನಿಗದಿಪಡಿಸಿರುವ ಒಟ್ಟು ಭೌತಿಕ ಗುರಿ | ಸಾಮಾನ್ಯ ಗುರಿ | ಎಸ್.ಸಿ.ಪಿ. ಗುರಿ |
|---|---|---|---|---|---|
| 1 | ಬಾಗಲಕೋಟೆ | 40.00 | 303 | 293 | 10 |
| 2 | ಬೆಂಗಳೂರು (ಗ್ರಾ) | 52.00 | 393 | 383 | 10 |
| 3 | ಬೆಂಗಳೂರು ನಗರ | 40.00 | 303 | 293 | 10 |
| 4 | ಬೆಳಗಾವಿ | 80.00 | 5082 | 5072 | 10 |
| 5 | ಬಳ್ಳಾರಿ | 48.00 | 363 | 353 | 10 |
| 6 | ಬೀದರ್ | 40.00 | 303 | 293 | 10 |
| 7 | ವಿಜಯಾಪುರ | 40.00 | 303 | 293 | 10 |
| 8 | ಚಾಮರಾಜನಗರ | 40.00 | 303 | 293 | 10 |
| 9 | ಚಿಕ್ಕಮಗಳೂರು | 40.00 | 303 | 293 | 10 |
| 10 | ಚಿಕ್ಕಬಳ್ಳಾಪುರ | 32.00 | 242 | 232 | 10 |
| 11 | ಚಿತ್ರದುರ್ಗ | 28.00 | 212 | 202 | 10 |
| 12 | ದಕ್ಷಿಣ ಕನ್ನಡ | 60.00 | 1000 | 990 | 10 |
| 13 | ದಾವಣಗೆರೆ | 40.00 | 303 | 293 | 10 |
| 14 | ಧಾರವಾಡ | 40.00 | 303 | 293 | 10 |
| 15 | ಗದಗ | 20.00 | 151 | 141 | 10 |
| 16 | ಕಲಬುರಗಿ | 16.00 | 500 | 490 | 10 |
| 17 | ಹಾಸನ | 80.00 | 606 | 596 | 10 |
| 18 | ಹಾವೇರಿ | 80.00 | 606 | 596 | 10 |
| 19 | ಕೊಡಗು | 24.00 | 181 | 171 | 10 |
| 20 | ಕೋಲಾರ | 8.00 | 60 | 50 | 10 |
| 21 | ಕೊಪ್ಪಳ | 40.00 | 303 | 293 | 10 |
| 22 | ಮಂಡ್ಯ | 40.00 | 303 | 293 | 10 |
| 23 | ಮೈಸೂರು | 80.00 | 606 | 596 | 10 |
| 24 | ರಾಮನಗರ | 16.00 | 121 | 111 | 10 |
| 25 | ರಾಯಚೂರ್ | 40.00 | 303 | 293 | 10 |
| 26 | ಶಿವಮೊಗ್ಗ | 80.00 | 1000 | 990 | 10 |
| 27 | ತುಮಕೂರು | 48.00 | 363 | 353 | 10 |
| 28 | ಉಡುಪಿ | 20.00 | 500 | 490 | 10 |
| 29 | ಉತ್ತರ ಕನ್ನಡ | 24.00 | 181 | 171 | 10 |
| 30 | ಯಾದಗಿರ್ | 20.00 | 500 | 490 | 10 |
| | | | **16000** | **15700** | **300** |

ನಿರ್ದೇಶಕರು (ಗ್ರಾ.ಮೂ.ಹಾ-2)
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು